ಜೆಎಸ್ಎಸ್ ಮಹಾವಿದ್ಯಾಪೀಠ

ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತ)

ಊಟಿ ರಸ್ತೆ, ಮೈಸೂರು- ೫೭೦ ೦೨೫

(ಮೈಸೂರು ವಿಶ್ವವಿದ್ಯಾನಿಲಯದ ಸ್ವಾಯತ್ತ ಹಾಗೂ ನ್ಯಾಕ್‌ನಿಂದ 'ಎ' ಶ್ರೇಣಿ ಮಾನ್ಯತೆ ಪಡೆದಿದೆ)

☎ : 0821-2548236 & 2548380 ಫ್ಯಾಕ್ಸ್ : 0821-2548238 ಇ-ಅಂಚೆ : jssautonomous@gmail.com ವೆಬ್ ಸೈಟ್ : www.jsscacs.org

ಸಂಖ್ಯೆ: ಜೆಎಸ್ಎಸ್ಎಸ್ಸಿಎಂ/ ದಿನಾಂಕ: 05.02.2013

ಪ್ರಕಟಣೆಯ ಕೃಪೆಗಾಗಿ

ಚಾಮುಂಡಿವಲಯ ವಾಲಿಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆ

ಮೈಸೂರು ವಿಶ್ವವಿದ್ಯಾಲಯ ಅಂತರಕಾಲೇಜು ಚಾಮುಂಡಿವಲಯ ವಾಲಿಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಗಳು ದಿನಾಂಕ: 2-2-2013 ರಂದು ಊಟಿರಸ್ತೆಯ ಜೆಎಸ್ಎಸ್ ಪದವಿ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು. ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಎಲ್ಲ ತಂಡದವರಿಗೂ ಶುಭಕೋರಿ ಸ್ಪರ್ಧೆಗಳಿಗೆ ಚಾಲನೆ ನೀಡಿದರು. ಬಾಲ್ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಜೆಎಸ್ಎಸ್ ಪದವಿ ಕಾಲೇಜಿನವರು ಸ್ನಾತಕೋತ್ತರ ಕ್ರೀಡಾಮಂಡಳಿಯ ವಿರುದ್ಧ 22-29, 29-21, 29-8 ಅಂಕಗಳಿಂದ ಜಯ ಗಳಿಸಿದರು. ವಾಲಿಬಾಲ್ ಪಂದ್ಯದಲ್ಲಿ ಸ್ನಾತಕೋತ್ತರ ಕ್ರೀಡಾಮಂಡಳಿಯವರು ಜೆಎಸ್ಎಸ್ ಪದವಿ ಕಾಲೇಜು ವಿರುದ್ಧ 25-17 ಮತ್ತು 25-23 ಅಂಕಗಳಿಂದ ಜಯ ಗಳಿಸಿದರು. ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ಪಡೆದ ತಂಡಗಳು ಮಾರ್ಚ್ ತಿಂಗಳ ಅಂತ್ಯದಲ್ಲಿ ಮಾನಸಗಂಗೋತ್ರಿಯಲ್ಲಿ ನಡೆಯಲಿರುವ ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು ಅಂತರವಲಯ ಪುರುಷರ ಕ್ರೀಡಾಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಗಳಿಸಿರುತ್ತವೆ.

ಪ್ರಾಂಶುಪಾಲರು
ಜೆ. ಎಸ್. ಎಸ್. ಕಾಲೇಜು
ಊಟಿ ರಸ್ತೆ, ಮೈಸೂರು.570 025

ಗೆ

ಸಂಪಾದಕರು / ವರದಿಗಾರರು

- - - - - - - - - - - - - -

- - - - - - - - - - - - - -